# ರಜೆ ಪ್ರಯಾಣ ರಿಯಾಯಿತಿ (ಎಲ್.ಟಿ.ಸಿ.)

## (ಕೆ.ಸಿ.ಎಸ್. ನಿಯಮ 550 ನೋಡಿ)

ನಿಯಮವಳಿ 550 (1) ರ ಪ್ರಕಾರ ಒಬ್ಬ ಸರ್ಕಾರಿ ನೌಕರನು ಭಾರತದಲ್ಲಿ ಯಾವುದೇ ಸ್ಥಳಕ್ಕೆ ಪ್ರಯಾಣ ಮಾಡುವ ಪ್ರವಾಸ ಸೌಲಭ್ಯಕ್ಕೆ ಅರ್ಹನಾಗಿರುತ್ತಾನೆ.

1. ಈ ಸೌಲಭ್ಯವು ಸರ್ಕಾರಿ ನೌಕರರಿಗೆ ಅವನ ಸಂಪೂರ್ಣ ಸೇವಾವಧಿಯಲ್ಲಿ ಎರಡು ಸಲ ಮಾತ್ರ ದೊರೆಯುತ್ತದೆ.
2. ಸರ್ಕಾರಿ ನೌಕರನು ಸೇವೆಗೆ ಸೇರಿದ 10ನೇ ವರ್ಷದಿಂದ 15ನೇ ವರ್ಷದ ವರೆಗಿನ ಅವಧಿಯು ಮೊದಲನೇ ಬ್ಲಾಕ್ ಅವಧಿಯಾಗಿರುತ್ತದೆ. 16ನೇ ವರ್ಷದಿಂದ ವಯೋ ನಿವೃತ್ತಿ ಅಥವಾ ಸೇವೆ ಮುಕ್ತಾಯದ ವರೆಗಿನ ಅವಧಿಯು 2ನೇ ಬ್ಲಾಕ್ ಅವಧಿಯಾಗಿರುತ್ತದೆ (15 ವರ್ಷಗಳ ವರೆಗಿನ – ಈವರೆಗಿನ ಸೇವಾವಧಿಯಲ್ಲಿ ಒಂದು ಬಾರಿಯು ಈ ಸೌಲಭ್ಯವನ್ನು ಪಯೋಗಿಸಿಕೊಳ್ಳದೇ ಇರುವಂತಹ ನೌಕರನು, ಆತನ ಉಳಿದ ಸೇವಾ ಅವಧಿಯಲ್ಲಿ ಎರಡು ಬಾರಿ ಪಡೆದುಕೊಳ್ಳಲು ಅರ್ಹನಾಗತಕ್ಕದ್ದು)
3. ಈ ರಿಯಾಯ್ತಿಯನ್ನು ಸಾಂಧರ್ಭಿಕ ರಜೆ ಮತ್ತು ವಿಶೇಷ ಸಾಂದರ್ಭಿಕ ರಜೆಯು ಒಳಗೊಂಡಂತೆ ಯಾವುದೇ ರಜೆಯ ಅವಧಿಯಲ್ಲಿ ಬಳಸಬಹುದು.
4. ಈ ಸೌಲಭ್ಯವನ್ನು ಸರ್ಕಾರಿ ನೌಕರನು ಸ್ವಂತಕ್ಕಾಗಿ ಮತ್ತು ತನ್ನ ಕುಟುಂಬದ ಸದಸ್ಯರಿಗಾಗಿ ಪಡೆಯಬಹುದು. ಕುಟುಂಬವೆಂದರೆ, ಗಂಡ ಅಥವಾ ಹೆಂಡತಿ ನೌಕರನ ಮೇಲೆ ಅವಲಂಬಿತವಿರುವ ಇಬ್ಬರು ಮಾತ್ರ ನ್ಯಾಯ ಬದ್ದ ಮಕ್ಕಳು ಒಬ್ಬ  ಹೆಂಡತಿ ಮಾತ್ರ ಈ ಸೌಲಭ್ಯ ದೊರೆಯುತ್ತದೆ. ಗಂಡ ಮತ್ತು ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದರೆ. ಈ ಸೌಕರ್ಯ ಒಬ್ಬರಿಗೆ ಮಾತ್ರ ಲಭ್ಯವಾಗುತ್ತದೆ.
5. ಈ ಸೌಲಭ್ಯದ ಪ್ರಕಾರ ಪ್ರಯಾಣವನ್ನು ನೌಕರನ ಸೇವೆ ಕೇಂದ್ರ ಸ್ಥಾನದಿಂದ ಭಾರತದ ಯಾವುದೇ ಊರಿಗೆ ಕೈಗೊಳ್ಳಬಹುದು. ಆದರೆ ಅಂತಹ ಊರಿಗೆ ನೇರ ರೈಲು ಸಂಪರ್ಕವಿರಬೇಕು ಅಥವಾ ನಿಗದಿತ ಶುಲ್ಕ ವಿಧಿಸುವ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಿರಬೇಕು.
6. ಪ್ರವಾಸ ಸೌಲಭ್ಯವನ್ನು ಉಪಯೋಗಿಸಬಯಸುವ ನೌಕರರು ನಮೂನೆ – 20 ರಲ್ಲಿ ತಕ್ಷಣ ಅಧಿಕಾರಿಗಳ ಮೂಲಕ ನಿಯಂತ್ರಣಾಧಿಕಾರಿಗಳಿಗೆ ಮುಂಚಿತವಾಗಿ ಅರ್ಜಿ ಸಲ್ಲಿಸಿ, ಪ್ರವಾಸ ಪ್ರಾರಂಭಿಸುವ ಮೊದಲು ಮಂಜೂರಾತಿ ಪಡೆಯಬೇಕು.
7. 1. ಸರ್ಕಾರಿ ನೌಕರರನು ಬೇಟಿ ನೀಡುವ ಸ್ಥಳಕ್ಕೆ ಮುಂಗಡದ ಹಣವನ್ನು ಪಡೆದಲ್ಲಿ, ಮುಂಗಡ ಪಡೆದ 15 ದಿನದೊಳಗಾಗಿ ಪ್ರವಾಸವನ್ನು ಕೈಗೊಳ್ಳಬೇಕು ಇಲ್ಲವಾದರೆ ಹಣವನ್ನು ಸರ್ಕಾರಕ್ಕೆ ಮರು ಪಾವತಿ ಮಾಡಬೇಕು.
   2. ಮುಂಗಡ ಹಣ ಮರು ಪಾವತಿಯಾಗದೆ ಇದ್ದರೆ, ನಿಯಂತ್ರಣಾಧಿಕಾರಿಗಳು ವಸೂಲಿಗಾಗಿ ಕ್ರಮ ಕೈಗೊಳ್ಳಬೇಕು.
8. ಪ್ರವಾಸ ಮುಗಿದ ನಂತರ ಒಂದು ತಿಂಗಳ ಅವಧಿಯಲ್ಲಿ ಅಂತಿಮ ಪ್ರವಾಸ ಭತ್ಯೆ ಬಿಲ್ಲನ್ನು ಈ ಕೆಳಗಿನ ನಮೂನೆಯಲ್ಲಿನ ಪ್ರಮಾಣ ಪತ್ರದೊಂದಿಗೆ ಸಲ್ಲಿಸತಕ್ಕದ್ದು.

**ನಮೂನೆ–20**

**(ಕೆ.ಸಿ.ಎಸ್. ನಿಯಮ 550)**

# ಭಾರತದಲ್ಲಿ ಯಾವುದೇ ಸ್ಥಳಕ್ಕೆ ಪ್ರಯಾಣ ಮಾಡಲು ರಜೆ ಪ್ರಯಾಣ ರಿಯಾಯಿತಿ (ಎಲ್.ಟಿ.ಸಿ.) ಸೌಲಭ್ಯಕ್ಕೆ ಅರ್ಜಿ

| | | |
|---|---|---|
| 1. | ನೌಕರರ ಹೆಸರು | |
| 2. | ಜನ್ಮ ದಿನಾಂಕ | |
| 3. | ಪದನಾಮ ಮತ್ತು<br>ಕೆಲಸ ಮಾಡುತ್ತಿರುವ ಕಚೇರಿ | |
| 4. | ನೇಮಕಾತಿಯ ದಿನಾಂಕ | |
| 5. | ರಾಜ್ಯ ಸರ್ಕಾರದಲ್ಲಿ ಸಲ್ಲಿಸಿದ ಒಟ್ಟು<br>ನಿರಂತರ ಸೇವೆಯ ಅವಧಿ | |
| 6. | ಭೇಟಿ ಮಾಡುವ ಸ್ಥಳ ಮತ್ತು ಪ್ರಯಾಣ<br>ಮಾಡಬಹುದಾದ ದಿನಾಂಕ | |
| 7. | ಸರ್ಕಾರಿ ನೌಕರನೊಂದಿಗೆ ಪ್ರಯಾಣ<br>ಮಾಡುವ ಕುಟುಂಬ ಸದಸ್ಯರ ಸಂಖ್ಯೆ | |

ಅ. ರಜೆ ಪ್ರಯಾಣ ರಿಯಾತಿ ಸೌಲಭ್ಯವನ್ನು ____________________ ಬಾರಿಗೆ ಉಪಯೋಗಿಸಿಕೊಳ್ಳುತ್ತಿರುವುದಾಗಿ ಪ್ರಮಾಣೀಕರಿಸಿದೆ.

ಆ. ರಾಜ್ಯ ಸರ್ಕಾರಿ ಸೇವೆಯಲ್ಲಿ ಉದ್ಯೋಗದಲ್ಲಿರುವ ನನ್ನ ಪತ್ನಿ/ಪತಿಯು ತನಗಾಗಲಿ ಅಥವಾ ನನ್ನ ಕುಟುಂಬದ ಯಾವ ಸದಸ್ಯನಿಗಾಗಲೀ ಈ ಸೌಲಭ್ಯವನ್ನು ಉಪಯೋಗಿಸಿಕೊಂಡಿಲ್ಲವೆಂದು ಪ್ರಮಾಣೀಕರಿಸಿದೆ.

ಇ. ನನ್ನ ಪತ್ನಿ/ಮಕ್ಕಳು ನನ್ನ ಜೊತೆಯಲ್ಲಿ ವಾಸವಾಗಿದ್ದಾರೆ ಮತ್ತು ನನ್ನ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದಾರೆಂದು ಪ್ರಮಾಣೀಕರಿಸಿದೆ.

ದಿನಾಂಕ: ________________ ಸಹಿ ________________________

ಹೆಸರು ____________________

ಪದನಾಮ _________________

ನಿಯಂತ್ರಣಾಧಿಕಾರಿಗಳ ಧೃಢೀಕರಣ
ಸಹಿ ಮತ್ತು ಮೊಹರು

# ಪ್ರಮಾಣ ಪತ್ರ

ನಾನು ಮತ್ತು ನನ್ನ ಕುಟುಂಬದ ಸದಸ್ಯರು ದಿನಾಂಕ: ______________________ ದಿಂದ ______________________ ವರೆಗಿನ ಅವಧಿಯಲ್ಲಿ ಟಿಕೆಟ್ ಸಂಖ್ಯೆ: ______________________ ಮೂಲಕ ______________________ ರೈಲು / ಬಸ್ಸು / ಸಮುದ್ರದ ಮೂಲಕ ______________________ ದಿಂದ ______________________ ಗೆ (ಘೋಷಿಸಿದ ಬೇಟಿಯ ಸ್ಥಳ) ಪ್ರಯಾಣ ಕೈಗೊಂಡಿದ್ದೇವೆ ಎಂದು ಪ್ರಮಾಣೀಕರಿಸಲಾಗಿದೆ.

ಸಹಿ ______________________

ಹೆಸರು ______________________

ಪದನಾಮ ______________________